

ಹೂಗಾರ ಪಂಪಣ್ಣ ಮತ್ತು ತಂಡದ ವತಿಯಿಂದ ಪ್ರಸ್ತುತಗೊಂಡ 'ಶುಂಭ ನಿಶುಂಭರ ವಧೆ' ಬಯಲಾಟ ಪ್ರದರ್ಶನದ ಒಂದು ದೃಶ್ಯ.

ಬುದ್ಧಿಜೀವಿಗಳಿಗೂ ಕಮ್ಮಿಯಲ್ಲ.

ಕೊರವಂಜಿ ಪಾತ್ರವು ಸಾಮಾನ್ಯ ಬುಡಕಟ್ಟು ಮಹಿಳೆಯ ಪಾತ್ರ. ಸರ್ವಶಕ್ತ ಸರ್ವಜ್ಞನಾದ ಕೃಷ್ಣ, ಇಲ್ಲಿ ಸಾಮಾನ್ಯ ವ್ಯಕ್ತಿಯಾಗಿ ಮಾರ್ಪಾಡಾಗುವುದು. ಇಲ್ಲಿ ಮಾರುವೇಷದಲ್ಲಿ ಕೃಷ್ಣ ಸಾಮಾನ್ಯರಿಗೆ ಹತ್ತಿರವೆನಿಸುವ, ಇವನಾರವ ಎನಿಸದೆ ಇವ ನಮ್ಮವ ಎನಿಸುವವನು. ಕೃಷ್ಣ ದೂತೆಗೆ ಹೇಳುತ್ತಾನೆ- 'ಸತ್ಯಭಾಮೆ ಮಂದಿರಕ್ಕೆ ವೇಷ ಬದಲಿಸಿ ಸ್ತ್ರೀರೂಪ ಧಾರಣೆ ಮಾಡಿ ಹೋಗಬೇಕಂತೀನಿ...'

ಆಗ ದೂತೆ- 'ಯಪಾ ನಿಮಗ ಸೀರಿ ಉಡೋ ಪ್ರಸಂಗ ಬಂತಲ್ಲರೀ!' ಅನ್ನುವನು. ಇಲ್ಲಿ ಹಾಸ್ಯ, ವಿಡಂಬನೆಯಲ್ಲಿಯೂ ದೇವ- ದೇವತೆ ಗಳಿಗೂ ಸಹ ಕಠಿಣ ಪ್ರಸಂಗಗಳು ತಪ್ಪಿದ್ದಲ್ಲ ಎಂಬ ವಿಚಾರ ಹೇಳುವುದಾಗಿದೆ. ದೂತೆ ಇದ್ದವಳು ಕೊರವಂಜಿ ಸನ್ನಿವೇಶದಲ್ಲಿ ಕೃಷ್ಣನನ್ನು ಛೇಡಿಸುತ್ತಲೇ ಇರುವುದು ಇದರ ಘನತ್ವ. ಸಾಮಾನ್ಯ ಮನುಷ್ಯ ಮತ್ತು ದೈವತ್ವಗಳ ಸಮ್ಮಿಲನ, ಆಪ್ತ ಭಾವ ಇಲ್ಲಿದೆ.

ದೊಡ್ಡಾಟ, ಸಣ್ಣಾಟ, ಯಕ್ಷಗಾನ, ಮಂಟೇಸ್ವಾಮಿ ಕಥಾನಕಗಳು ಬಯಲಾಟದ 'ಸ್ಕೂಲು'ಗಳು. ಇವು ಬಹುತ್ವದ ಪ್ರತೀಕವಾಗಿ ಅತ್ಯಂತ ಮಾನವ್ಯ ಗುಣಗಳ ಅಭಿವ್ಯಕ್ತಿಗಳಾಗಿವೆ. ದೊಡ್ಡಾಟ ಬಯಲಾಟಗಳಲ್ಲಿ ತೆಲುಗಿನ ಪ್ರಭಾವವಿದ್ದರೆ ಸಣ್ಣಾಟಗಳ ಮೇಲೆ ಮರಾಠಿ ಭಾಷೆ, ಸಂಸ್ಕೃತಿಯ ಪ್ರಭಾವಗಳಿವೆ. ಇವು ಕಾಲ, ದೇಶ, ಪರಿಸರಗಳಿಗೆ ಅನುಗುಣವಾಗಿ ಪ್ರಸ್ತುತಗೊಳ್ಳುತ್ತವೆ. ಕೆಲವು ಸಾರೆ ಇಂಗ್ಲಿಷ್, ಹಿಂದಿಯನ್ನು ಬಳಸುತ್ತಾರೆ. ಹಸನಸಾಬ ತಮ್ಮ ಕಾವ್ಯದೊಳಗೆ ಬಡೇಸಾಹಿಬರನ್ನು ನೆನೆಯುತ್ತಾರೆ. ಹೀಗೆ ಭಾಷೆ, ಸಂಜ್ಞೆ, ರೂಪಕ, ಪ್ರತಿಮೆಗಳ ಮೂಲಕ ಪುರಾಣಗಳ ಕಲ್ಪನೆಗಳನ್ನು ಮರುಚಿಂತನೆಗೆ ಒಡ್ಡುತ್ತಾರೆ. ಅದು ಆಯಾ ಕಾಲದ ಅನುಭವ ಭಾಷೆಯಾಗಿ ಧ್ವನಿಸುತ್ತದೆ. ಬುದ್ಧಿಜೀವಿಗಳ ಚರ್ಚೆಯಲ್ಲಿ ಅಕಾಡೆಮಿಕ್ ಸ್ವರೂಪ ಪಡೆದರೆ, ದೇವಸ್ಥಾನಗಳಲ್ಲಿ ರಿಲಿಜಿಯಸ್ ನೆಲೆಯ ತನ್ನ Space ಅನ್ನು ಬದಲಿಸಿಕೊಂಡು Idiologistic ಆಗಿ ಪರಿವರ್ತನೆಗೊಳ್ಳುವ ಶಕ್ತಿ ಈ ಆಟಗಳಿಗಿದೆ. ಮಿಥ್ ಅನ್ನುವುದೇ ಒಂದು ಭಾಷೆಯಾಗಿ ರೂಪು ಪಡೆದಿದೆ. ಅದು ವ್ಯಾಕರಣವನ್ನು ಮುರಿದು ಕಟ್ಟಿದ ಹಾಗೆ ಪುರಾಣ, ಇತಿಹಾಸಗಳ ಕಾರ್ಯಗಳನ್ನು ಮುರಿದು ಕಟ್ಟುವ ಕಾಯಕವನ್ನು ಮಾಡುತ್ತಲೇ ಬಂದಿದೆ.

●